ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 05.06.2023.**

**ಮುಂದುವರೆದ ಪಾಟೀ ಸವಾಲು - ವಾದಿ ಪರ ವಕೀಲರಿಂದಃ**

10) ಇಬ್ಬರೂ ವಾದಿಗಳು ಮತ್ತು 2 ನೇ ಪ್ರತಿವಾದಿ ಈ ಮೂರು ಜನ ನಮಗೆ ಆಸ್ತಿ ಮಾರಾಟ ಮಾಡಿದ ವೆಂಕಟಪ್ಪನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ, ನನಗೆ ಗೊತ್ತಿರುವ ಮಾಹಿತಿ ಪ್ರಕಾರ ವೆಂಕಟಪ್ಪನವರಿಗೆ ವೆಂಕಟರೆಡ್ಡಿ ಎಂಬ ಒಬ್ಬನೇ ಮಗ ಇರುತ್ತಾರೆ. ವೆಂಕಟಪ್ಪನಿಗೆ ಈ ದಾವೆಯ 3 ನೇ ಪ್ರತಿವಾದಿ ರತ್ನಮ್ಮ ಮಗಳಾಗಬೇಕು ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. ನಾನು ಹೇಳುತ್ತೇನೆ ವೆಂಕಟಪ್ಪನ ವಂಶವೃಕ್ಷವನ್ನು ನೋಡಿ ಅದರ ಪ್ರಕಾರ ನಾನು ಆಸ್ತಿ ಖರೀದಿ ಮಾಡಿದ್ದೇನೆ. ಪ್ರತಿವಾದಿ ನಂ.1(ಎ) ಸರಸ್ವತಮ್ಮ ವೆಂಕಟಪ್ಪನ ಪತ್ನಿ ಎಂದರೆ ನನಗೆ ಗೊತ್ತಿಲ್ಲ. ವೆಂಕಟಪ್ಪ ತನ್ನ ಹೆಂಡತಿ ಮತ್ತು ಎಲ್ಲಾ ಮಕ್ಕಳೊಂದಿಗೆ ಒಟ್ಟು ಕುಟುಂಬದಲ್ಲಿ ವಾಸ ಮಾಡುತ್ತಿದ್ದರು ಎಂದರೆ ಅವರ Family Affairs ಬಗ್ಗೆ ನನಗೆ ಗೊತ್ತಿಲ್ಲ. ವೆಂಕಟಪ್ಪನು ಒಟ್ಟು ಕುಟುಂಬದ ಕರ್ತನಾಗಿದ್ದರೂ ಕೂಡ ಆತನು ಒಟ್ಟು ಕುಟುಂಬದ ನಿರ್ವಹಣೆಯನ್ನು ಸರಿಯಾಗಿ ಮಾಡುತ್ತಿರಲಿಲ್ಲ ಎಂದರೆ ನನಗೆ ಗೊತ್ತಿದ್ದಂತೆ ವೆಂಕಟಪ್ಪ ಒಬ್ಬ ಸಜ್ಜನ (Gentleman) ಇರುತ್ತಾರೆ. ವೆಂಕಟಪ್ಪನಿಗೆ ಎಲ್ಲಾ ವಿಧವಾದ ದುಷ್ಚಟಗಳು ಇದ್ದವು ಮತ್ತು ಆತನ ಸುತ್ತಲೂ ಯಾವಾಗಲೂ ದುಷ್ಚಟ ಇರುವ ವ್ಯಕ್ತಿಗಳು ಇರುತ್ತಿದ್ದರು ಎಂದರೆ ವೆಂಕಟಪ್ಪ ಸಜ್ಜನ ಎಂದು ನಾನು ಈಗಾಗಲೇ ಹೇಳಿದ್ದೇನೆ. ವೆಂಕಟಪ್ಪನು ಕುಟುಂಬ ಸದಸ್ಯರ ಜೊತೆ ಇರುತ್ತಿರಲಿಲ್ಲ, ಆತನು ಅಲೆಮಾರಿ (Vagabond) ಜೀವನ ನಡೆಸುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಆತನು ತಿಂಗಳುಗಳ ಕಾಲ ಮನೆಗೆ ಬರದೇ ಕೆಟ್ಟ ಚಟ ಹೊಂದಿದ ಆತನ ಸ್ನೇಹಿತರ ಜೊತೆ ಇರುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ವೆಂಕಟಪ್ಪನು ತನ್ನ ಕೆಟ್ಟ ಚಟಗಳನ್ನು ತೀರಿಸಿಕೊಳ್ಳಲು ಒಟ್ಟು ಕುಟುಂಬದ ಆದಾಯವನ್ನು ಬಳಸಿಕೊಳ್ಳುತ್ತಿದ್ದ ಎಂದರೆ ಸಾಕ್ಷಿಯು ಆತನ ಸಜ್ಜನನಾಗಿದ್ದು, ತನ್ನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆಸ್ತಿ ಮಾರಾಟ ಮಾಡಿದ್ದಾರೆ ಎನ್ನುತ್ತಾರೆ. ವಾದಿಗಳು, 2 ಮತ್ತು 3 ನೇ ಪ್ರತಿವಾದಿಗಳು ಮಾತ್ರ ವೆಂಕಟಪ್ಪನ ಮಕ್ಕಳಾಗಿದ್ದು, ವೆಂಕಟಪ್ಪ ಆಸ್ತಿ ಮಾರಾಟ ಮಾಡುವ ಸಮಯದಲ್ಲಿ ಅವರು ಯಾರೂ

ವಿದ್ಯಾಭಾಸ ಮಾಡುತ್ತಿರಲಿಲ್ಲ ಎಂದರೆ ವೆಂಕಟಪ್ಪನೇ ತನ್ನ ಮಕ್ಕಳ ವಿದ್ಯಾಭಾಸಕ್ಕಾಗಿ ಆಸ್ತಿ ಮಾರಾಟ ಮಾಡುತ್ತಿರುವುದಾಗಿ ಹೇಳಿದ್ದರು. ಅವರೆಲ್ಲರೂ ಮುಂಚೆಯಿಂದಲೂ ಕೃಷಿಕರಾಗಿದ್ದು, ಈಗಲೂ ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ ಎಂದರೆ ನಾನು ವೆಂಕಟಪ್ಪ ನನಗೆ ಏನು ಹೇಳಿದ್ದರೋ ಅದನ್ನೇ ಹೇಳುತ್ತಿದ್ದೇನೆ. ವೆಂಕಟಪ್ಪ ಹೇಳಿದ ಪ್ರಕಾರ ಆತನ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆಯೇ ಎಂಬ ಬಗ್ಗೆ ನಾನು ವಿಚಾರಣೆ ಮಾಡಿರಲಿಲ್ಲ. ವೆಂಕಟಪ್ಪನು ಕುಟುಂಬವನ್ನು ತೊರೆದುಹೋಗಿದ್ದರಿಂದ ವಾದಿಗಳು ಒಟ್ಟು ಕುಟುಂಬದ ವ್ಯವಹಾಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರು ಕೃಷಿ ಚಟುವಟಿಕೆಗಳಿಂದ ಅತೀ ಕಡಿಮೆ ಆದಾಯ ಪಡೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಕುಟುಂಬಕ್ಕೆ ಬರುತ್ತಿದ್ದ ಅತೀ ಕಡಿಮೆ ಆದಾಯವನ್ನು ಕೂಡ ವೆಂಕಟಪ್ಪ ಕುಟುಂಬಕ್ಕಾಗಿ ಅಲ್ಲದೇ ತನ್ನ ದುಷ್ಚಟಗಳ ಪೂರೈಕೆಗೆ ಉಪಯೋಗಿಸುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ.

11) ದಾವಾ ಸ್ವತ್ತು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ವಾದಿಗಳು ತಮ್ಮ ತಂದೆಯ ಧೋರಣೆಯನ್ನು ಸಹಿಸದೇ ಆಸ್ತಿಯಲ್ಲಿ ಪಾಲು ಕೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಗಳು ಆಸ್ತಿಯಲ್ಲಿ ಪಾಲು ಕೇಳಿದ ನಂತರ 1998 ರಲ್ಲಿ ಒಂದು ಪಂಚಾಯತಿ ನಡೆದಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಪಂಚಾಯತಿಯಲ್ಲಿ ವೆಂಕಟಪ್ಪ ಮತ್ತು ಆತನ ಮಕ್ಕಳು ಭಾಗವಹಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಪಂಚಾಯತಿಯಲ್ಲಿ ತಂದೆ ಮತ್ತು ಮಕ್ಕಳ ನಡುವೆ ಆಸ್ತಿ ವಿಭಾಗವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ವಿಭಾಗದಲ್ಲಿ ಆಸ್ತಿಯು ತಂದೆ ಮತ್ತು ಗಂಡು ಮಕ್ಕಳ ನಡುವೆ ವಿಭಾಗವಾಗಿ ತಲಾ 1/3 ಅಂಶದಂತೆ ವಿಭಾಗವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಬಾಲಿದಿಮ್ಮನಹಳ್ಳಿ ಸರ್ವೆ ನಂ.26 ರ ಒಟ್ಟು ವಿಸ್ತೀರ್ಣ 2 ಎಕರೆ 30 ಗುಂಟೆ ಎಂದರೆ ನಾನು 1 ಎಕರೆ 34 ವರೆ ಗುಂಟೆ ಮಾತ್ರ ಖರೀದಿ ಮಾಡಿದ್ದೇನೆ. ಸದರಿ 2 ಎಕರೆ30 ಗುಂಟೆ ಪೈಕಿ 35 ವರೆ ಗುಂಟೆಯನ್ನು ರಸ್ತೆ ನಿರ್ಮಾಣಕ್ಕಾಗಿ ಭೂ-ಸ್ವಾಧೀನ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಸ್ತಿಯ ಪಶ್ಚಿಮ ಭಾಗದಲ್ಲಿ ಭೂ

-ಸ್ವಾಧೀನ ಮಾಡಿಕೊಂಡು ರಸ್ತೆ ನಿರ್ಮಾಣ ಮಾಡಲಾಗಿದ್ದು, ಈಗಲೂ ಸದರಿ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿ ರಸ್ತೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ಆಸ್ತಿಯನ್ನು ನೋಡಿದ್ದುಂಟೇ? ಎಂದರೆ ನೋಡಿದ್ದೇನೆ. ದಾವಾ ಸ್ವತ್ತಿನ ಬೌಂಡರಿಗಳನ್ನು ನನ್ನಿಂದ ಹೇಳಲು ಆಗುತ್ತದೆಯೇ? ಎಂದರೆ ಈಗ ನನಗೆ ಬೌಂಡರಿಗಳು ನೆನಪಾಗುತ್ತಿಲ್ಲ. ನಾನು ಇತ್ತಿಚಿಗೆ ದಾವಾ ಸ್ವತ್ತನ್ನು ನೋಡಿದ್ದುಂಟೇ? ಎಂದರೆ ನೋಡಿಲ್ಲ. ದಾವಾ ಸ್ವತ್ತಿನ ಪಶ್ಚಿಮಕ್ಕೆ ರಸ್ತೆ ಇದೆ ಎಂದು ಸೂಚಿಸಿದರೆ ನನಗೆ ಗೊತ್ತಿಲ್ಲ. ಆ ರಸ್ತೆಯು ಉತ್ತರದಿಂದ ದಕ್ಷಿಣ ಮಾರ್ಗವಾಗಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ರಸ್ತೆಯನ್ನು Airport and Industrial Area ತಲುಪಲಿಕ್ಕಾಗಿ ನಿರ್ಮಾಣ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ರಸ್ತೆಯ ಸಲುವಾಗಿ ಭೂ-ಸ್ವಾಧೀನ ಪಡಿಸಿಕೊಂಡಾಗ ಪರಿಹಾರದ ಹಣವನ್ನು ಠೇವಣಿ ಮಾಡಿದ್ದರು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ, ನಾನು Clear property ಖರೀದಿ ಮಾಡಿದ್ದೆ. ಠೇವಣಿ ಮಾಡಿದ ಸದರಿ ಹಣವನ್ನು ವೆಂಕಟಪ್ಪ ಪಡೆದುಕೊಳ್ಳಲು ಎಂದು ಇನ್ನೂ ಪ್ರಶ್ನೆ ಪೂರ್ಣಗೊಳ್ಳುವ ಮುಂಚೆಯೇ ಸಾಕ್ಷಿಯವರು ನನಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ. ಆ ಸಮಯದಲ್ಲಿ ವಾದಿಗಳು ವೆಂಕಟಪ್ಪ ಮತ್ತು KIADB ವಿರುದ್ಧ ಓ.ಎಸ್.ನಂ.31/2004 ನ್ನು ದಾಖಲಿಸಿ ಠೇವಣಿ ಮಾಡಿದ ಹಣವನ್ನು ಸಂದಾಯ ಮಾಡದಂತೆ ತಡೆಯಾಜ್ಞೆ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಪರಿಹಾರದ ಮೊತ್ತವನ್ನು ವಾದಿಗಳು ಮತ್ತು 2 ನೇ ಪ್ರತಿವಾದಿ ಪಡೆದುಕೊಂಡರು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಪಿತ್ರಾರ್ಜಿತ ಆಸ್ತಿಯಾಗಿದ್ದು, ವೆಂಕಟಪ್ಪನಿಗೆ ಅದನ್ನು ಮಾರಾಟ ಮಾಡುವ ಪ್ರತ್ಯೇಕ ಹಕ್ಕು ಇರಲಿಲ್ಲ ಎಂದರೆ ಆತನ ಮಗ ಕೂಡ ಕ್ರಯಪತ್ರಕ್ಕೆ ಸಹಿ ಮಾಡಿದ್ದಾರೆ. ಖರೀದಿ ಮಾಡುವ ಮುಂಚೆ ದಾವಾ ಸ್ವತ್ತಿನ Title ಬಗ್ಗೆ ನಾನು ವಿಚಾರಣೆ ಮಾಡಿದ್ದುಂಟೇ? ಎಂದರೆ 20 ವರ್ಷಗಳ ಹಿಂದೆ ಖರೀದಿ ಮಾಡಿರುವ ಕಾರಣ ನನಗೆ ನೆನಪಾಗುತ್ತಿಲ್ಲ. ವೆಂಕಟಪ್ಪನ ಮಕ್ಕಳಲ್ಲಿ ಯಾರೂ ಕೂಡ ನನ್ನ ಕ್ರಯಪತ್ರಕ್ಕೆ ಪಕ್ಷಕಾರರಲ್ಲ ಎಂದರೆ ಸರಿಯಲ್ಲ. ಕ್ರಯಪತ್ರದಲ್ಲಿ ಒಬ್ಬ ವೆಂಕಟರೆಡ್ಡಿ ಬಿನ್ ವೆಂಕಟಪ್ಪ ಎಂಬ ವ್ಯಕ್ತಿಯನ್ನು ತೋರಿಸಿದ್ದು, ಸದರಿ ವ್ಯಕ್ತಿಯು ವೆಂಕಟಪ್ಪನ ಮಗ ವೆಂಕಟರೆಡ್ಡಿ ಅಲ್ಲ ಎಂದರೆ ಸರಿಯಲ್ಲ.

12) ಕ್ರಯಪತ್ರ ನೋಂದಣಿ ಮಾಡಿಕೊಳ್ಳುವಾಗ Sub-Registrar ರವರು ಮಾರಾಟ ಮಾಡುವವರ, ಖರೀದಿ ಮಾಡುವವರ ಮತ್ತು ಸಾಕ್ಷಿ ಸಹಿ ಮಾಡುವವರ ಪೋಟೋಗಳನ್ನು ಕ್ರಯಪತ್ರದಲ್ಲಿ ಪಡೆಯುತ್ತಾರೆ ಎಂದರೆ ಸರಿ. ನಿಡಿ-1 ಕ್ರಯಪತ್ರದಲ್ಲಿ ವೆಂಕಟರೆಡ್ಡಿ ಎಂದು ಪೋಟೋದಲ್ಲಿ ಕಾಣುತ್ತಿರುವ ವ್ಯಕ್ತಿ ವೆಂಕಟಪ್ಪನ ಮಗ ವೆಂಕಟರೆಡ್ಡಿ ಅಲ್ಲ ಎಂದರೆ ಸದರಿ ವೆಂಕಟರೆಡ್ಡಿ ಕ್ರಯಪತ್ರ ಬರೆದುಕೊಡಲು ಬಂದಿದ್ದರು, ಆದರೆ ನಿಡಿ-1 ರಲ್ಲಿ ಅವರ ಪೋಟೋ Blurr ಆಗಿ ಕಾಣುತ್ತಿದೆ ಅಷ್ಟೆ. ವೆಂಕಟರೆಡ್ಡಿ ಬಿನ್ ವೆಂಕಟಪ್ಪ Sub-Registrar ಕಚೇರಿಗೆ ಬಂದಿರಲೇ ಇಲ್ಲ ಎಂದರೆ ಸರಿಯಲ್ಲ. ಈ ದಾವೆಯ 4 ನೇ ಪ್ರತಿವಾದಿ ಮುನಿನಾರಾಯಣಪ್ಪ ಬಿನ್ ಚಿಕ್ಕಮುನೇಗೌಡ್, ಬೆಟ್ಟೆನಹಳ್ಳಿ ವಾಸಿಯನ್ನು ನಾನು Sub-Registrar ಕಚೇರಿಯಲ್ಲಿ Misrepresentation ಮಾಡುವ ಮೂಲಕ ಹಾಜರು ಪಡಿಸಿದ್ದೆ ಎಂದರೆ ಸರಿಯಲ್ಲ. ನಿಡಿ-1 ಪೋಟೋದಲ್ಲಿ ವೆಂಕಟರೆಡ್ಡಿ ಎಂದು ಕಾಣುತ್ತಿರುವ ಪೋಟೋದಲ್ಲಿರುವ ವ್ಯಕ್ತಿ 4 ನೇ ಪ್ರತಿವಾದಿ ಮುನಿನಾರಾಯಣಪ್ಪನದು ಎಂದರೆ ಸರಿಯಲ್ಲ. ನನಗೆ ನಿಡಿ-1 ರಲ್ಲಿ ಪೋಟೋ ಸ್ಪಷ್ಟವಾಗಿ ಕಾಣುತ್ತಿದ್ದರೂ ಕೂಡ ಮತ್ತು ಅದರಲ್ಲಿರುವ ವ್ಯಕ್ತಿ ವೆಂಕಟರೆಡ್ಡಿ ಅಲ್ಲದಿದ್ದರೂ ಕೂಡ ನಾನು ಅದು ವೆಂಕಟರೆಡ್ಡಿಯೇ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ವೆಂಕಟರೆಡ್ಡಿ ಈ ದಾವೆಯಲ್ಲಿ ಹಾಜರಾಗಿ ಆತನು ನನಗೆ ಕ್ರಯಪತ್ರ ಬರೆದುಕೊಡಲು Sub-Registrar ಕಚೇರಿಗೆ ಹೋಗಿರಲಿಲ್ಲ ಎಂದು ತಕರಾರು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವೆಂಕಟಪ್ಪ ಈಗ ಮೃತಪಟ್ಟಿದ್ದಾರೆ ಎಂದರೆ ಸರಿ.

13) ದಾವಾ ಸ್ವತ್ತು ವ್ಯವಸಾಯ ಮಾಡುವ ಜಮೀನು ಎಂದರೆ ಸರಿ. ಈಗಲೂ ಕೂಡ ದಾವಾ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈಗಲೂ ವೆಂಕಟಪ್ಪನ ಮಕ್ಕಳು ದಾವಾ ಸ್ವತ್ತಿನಲ್ಲಿ ವ್ಯವಸಾಯ ಮಾಡಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ವರ್ಷ ಕೂಡ ವಾದಿಗಳು ಮತ್ತು 2 ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ರಾಗಿ ಬೆಳೆ ಮತ್ತು ಜೋಳದ ಬೆಳೆಯನ್ನು ಬೆಳೆದಿದ್ದಾರೆ

ಎಂದರೆ ನನಗೆ ಗೊತ್ತಿಲ್ಲ. ಈ ದಿನಕ್ಕೂ ದಾವಾ ಸ್ವತ್ತಿನ ಕಂದಾಯ ದಾಖಲೆಗಳು ವೆಂಕಟಪ್ಪನ ಹೆಸರಿನಲ್ಲೇ ನಮೂದಾಗುತ್ತಿವೆ ಎಂದರೆ ಸರಿ. ಮುಂಚೆಯಿಂದಲೂ ವೆಂಕಟಪ್ಪನ ಮಕ್ಕಳೇ ದಾವಾ ಸ್ವತ್ತಿನ ವ್ಯವಸಾಯ ಮಾಡುತ್ತಾ ಬೆಳೆ ಬೆಳೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ದಿನಕ್ಕೆ ಕೂಡ ವೆಂಕಟಪ್ಪನ ಮಕ್ಕಳೇ ದಾವಾ ಸ್ವತ್ತಿನ ಭೌತಿಕ ಸ್ವಾಧೀನದಲ್ಲಿ ಇದ್ದರೆ ಎಂದರೆ ಸಾಕ್ಷಿಯು ವಿವಾದ ಕೋರ್ಟಿನಲ್ಲಿ ಇದೆ ನಾನೂ ಕೂಡ ಅಲ್ಲಿಗೆ ಹೋಗಬಹುದು ಎಂದು ಅಸ್ಪಷ್ಟವಾದ ಉತ್ತರ ನೀಡಿದ್ದು, ಸಾಕ್ಷಿಗೆ ಸ್ಪಷ್ಟವಾಗಿ ಹೌದು ಅಥವಾ ಇಲ್ಲ ಎಂದು ಉತ್ತರಿಸಿ ಎಂದು ಹೇಳಿದ ನಂತರ ಸೂಚನೆ ಸರಿಯಲ್ಲವೆಂದು ತಿಳಿಸಿದ್ದಾರೆ. ವೆಂಕಟಪ್ಪನ ಮಕ್ಕಳು ದಾವಾ ಸ್ವತ್ತಿನಲ್ಲಿ ಬೆಳೆ ಬೆಳೆದು ಅದರ ಉತ್ಪನ್ನಗಳನ್ನು ಅವರೇ ಪಡೆದುಕೊಳ್ಳುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಸ್ವಾಧೀನವನ್ನು ಯಾವತ್ತೂ ನನಗೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನ ಹೊಂದಿದ್ದೀನಾ? ಎಂದರೆ ಹೌದು. ನಾನು ದಾವಾ ಸ್ವತ್ತಿನಲ್ಲಿ ಏನು ಮಾಡುತ್ತಿದ್ದೇನೆ ಎಂದರೆ Just Vacant Land ಎನ್ನುತ್ತಾರೆ. ಅದು Just Vacant Land ಅಲ್ಲ ಅದರಲ್ಲಿ ವಾದಿಗಳು ಮತ್ತು 2 ನೇ ಪ್ರತಿವಾದಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ ಎಂದರೆ ಅವರು ಕಾನೂನು ಬಾಹಿರವಾಗಿ ಬೆಳೆ ಬೆಳೆಯುತ್ತಿದ್ದಾರೆ. ನಾನು ಕ್ರಯಪತ್ರ ಪಡೆದ ದಿನಾಂಕದಿಂದ ದಾವಾ ಸ್ವತ್ತಿನ ಮೇಲೆ ಯಾವತ್ತೂ ಮಾಲೀಕತ್ವದ ಹಕ್ಕನ್ನು ಚಲಾಯಿಸಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಹೆಸರಿಗೆ ಕಂದಾಯ ದಾಖಲೆಗಳ ನಮೂದಾತಿಗೆ ಪ್ರಯತ್ನ ಮಾಡಿದ್ದುಂಟೇ? ಎಂದರೆ ಮಾಡಿದ್ದೇನೆ. ಅಂತಹ ಪ್ರಯತ್ನವನ್ನು ಯಾವಾಗ ಮಾಡಿದ್ದೆ ಎಂದರೆ ಮಾಡಿದ್ದೇನೆ ಆದರೆ ದಿನಾಂಕ ನೆನಪಿಲ್ಲ. ಯಾರ ಮುಂದೆ ಕಂದಾಯ ದಾಖಲೆಗಳನ್ನು ನನ್ನ ಹೆಸರಿಗೆ ನಮೂದಿಸಿಕೊಳ್ಳಲು ಪ್ರಯತ್ನ ಮಾಡಿದ್ದೆ ಎಂದರೆ ನನಗೆ ನೆನಪಿಲ್ಲ. ನಾನು ಕಂದಾಯ ದಾಖಲೆಗಳನ್ನು ನನ್ನ ಹೆಸರಿಗೆ ಬದಲಿಸಿ ಕೊಳ್ಳಲು ಪ್ರಯತ್ನಿಸಿದ ಬಗ್ಗೆ ದಾಖಲೆಗಳು ಇರುತ್ತವೆಯೇ? ಎಂದರೆ ನನಗೆ ನೆನಪಿಲ್ಲ. ನಾನು ಯಾವತ್ತೂ ಕಂದಾಯ ದಾಖಲೆಗಳನ್ನು ನನ್ನ ಹೆಸರಿಗೆ ನಮೂದಿಸಿ ಕೊಳ್ಳಲು ಪ್ರಯತ್ನ ಪಟ್ಟಿಲ್ಲ ಎಂದರೆ

ಸರಿಯಲ್ಲ. ಖಾತೆ ಮಾಡಿಸಿಕೊಳ್ಳಲು ಕಂದಾಯ ಅಧಿಕಾರಿಗಳನ್ನು ಸಂಪರ್ಕಿಸಿದ ಬಗ್ಗೆ ದಾಖಲೆಗಳು ಇರುತ್ತವೆಯೇ? ಎಂದರೆ ನನಗೆ ನೆನಪಿಲ್ಲವೆಂದು ಈಗಾಗಲೇ ಹೇಳಿದ್ದೇನೆ. ವಾದಿಗಳು ಮತ್ತು 1 ರಿಂದ 3 ನೇ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಸಮನಾದ ಹಿಸ್ಸೆ ಹಕ್ಕು ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪಕ್ಷಕಾರರ ಕುಟುಂಬದಲ್ಲಿ ಈ ಮೊದಲು ಕಾನೂನು ಬದ್ಧವಾಗಿ ಯಾವುದೇ ವಿಭಾಗ ಆಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ವೆಂಕಟಪ್ಪನಿಗೆ ಕ್ರಯಪತ್ರ ಬರೆದುಕೊಡಲು ದಾವಾ ಸ್ವತ್ತಿನ ಮೇಲೆ ನಿರುಪಾಧಿಕವಾದ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಾನು, 1 ಮತ್ತು 4 ನೇ ಪ್ರತಿವಾದಿಗಳ ಜೊತೆ ಶಾಮೀಲಾಗಿ ದಾವಾ ಸ್ವತ್ತನ್ನು ಹೊಡೆದುಕೊಳ್ಳಲು ಕ್ರಯಪತ್ರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಕ್ರಯಪತ್ರಕ್ಕೆ ಸಾಕ್ಷಿ ಸಹಿ ಮಾಡಿದ ವ್ಯಕ್ತಿಗಳ ಹೆಸರುಗಳು ನನಗೆ ನೆನಪಿಲ್ಲ. ವಾದಿಗಳು ಕ್ರಯಪತ್ರ ಸೃಷ್ಟಿಸಿದ ಅಪಾದನೆ ಮೇಲೆ ನನ್ನ ಮತ್ತು ಪ್ರತಿವಾದಿ 4 ರವರ ವಿರುದ್ಧ ಸಲ್ಲಿಸಿದ ಖಾಸಗಿ ದೂರಿನ ಪ್ರಕಣದಲ್ಲಿ ನನ್ನ ವಶದಿಂದ ಮೂಲ ಕ್ರಯಪತ್ರವನ್ನು ಸ್ವಾಧೀನ ಪಡೆಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

(ಸಾಕ್ಷಿಯವರು ಖಾಸಗಿ ದೂರು ಮತ್ತು ಅವರ ಮೂಲ ಕ್ರಯಪತ್ರ ಈಗ ಯಾರ ವಶದಲ್ಲಿದೆ ಎಂಬ ಪ್ರಶ್ನೆಗಳಿಗೆ ಉತ್ತರಿಸಲು **ನಾನು ಈಗಾಗಲೇ ಈ ಪ್ರಶ್ನೆಗಳಿಗೆ ಉತ್ತರ ನೀಡಿದ್ದೇನೆ ಎಂದು ಹೇಳಿದ್ದು,** ಈ ದಿನ ಪಾಟೀ ಸವಾಲು ದಾಖಲಿಸಿಕೊಳ್ಳಲು ಬೇರೆ ಹಳೆಯ ಪ್ರಕರಣಗಳೂ ಕೂಡ ಬಾಕಿ ಇರುವ ಕಾರಣ ಸಾಕ್ಷಿಯವರು ಪ್ರಶ್ನೆಗೆ ಉತ್ತರಿಸಲು ತೋರಿಸುತ್ತಿರುವ ನಿರಾಕರಣೆಯ ಕಾರಣದಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಿದ್ದೇನೆ.)

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**